## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

## ಸಿ.ಸಿ. ಸಂಖ್ಯೆ: 520/2025

ಫ್ರಾಸಾ – 10

ಚಾಸಾ – 10

**ಸಾಕ್ಷಿಯು ದಿಃ 20.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಸಿದ್ದು |
| ತಂದೆಯ ಹೆಸರು | : | ಚಿಕ್ಕಲ್ಲೂರನಾಯಕ |
| ವಯಸ್ಸು | : | 37 ವರ್ಷ |
| ವೃತ್ತಿ | : | ಕೂಲಿ |
| ವಾಸಸ್ಥಳ | : | ಹಂಗಳ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ಚಾಸಾ 1 ಮತ್ತು 9 ನನಗೆ ಗೊತ್ತು. ಸಾಕ್ಷಿಯು ನಿಪಿ 5 ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 5(ಬಿ) ಎಂದು ಗುರ್ತಿಸಲಾಯಿತು. ಸದರಿ ಸಹಿಯನ್ನು ಸುಮಾರು 7–8 ವರ್ಷಗಳ ಹಿಂದೆ ಗುಂಡ್ಲುಪೇಟೆಯ ಸುರಭಿ ಹೋಟೆಲ್ ನ ಬಳಿ ಟಾಟಾ ಜೀಪ್ ಮತ್ತು ಇಚರ್ ವಾಹನಗಳ ನಡುವೆ ಅಪಘಾತವಾಗಿದ್ದ ವಿಚಾರವಾಗಿ ಪಂಚನಾಮೆ ಮಾಡುತ್ತಿದ್ದು ಚಾಸಾ 1 ರವರು ಹೇಳಿದ ಮೇರೆಗೆ ಸಂಜೆ 5.30 ರಿಂದ 5.40ರ ಸಮಯದಲ್ಲಿ ಮಾಡಿರುತ್ತೇನೆ. ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿ ಫೋಟೋ ತೆಗೆದು ಸಹಿ ಪಡೆದಿರುತ್ತಾರೆ. ನಿಪಿ 2, 3, 6 ಮತ್ತು 7 ಫೋಟೋದಲ್ಲಿ ಕಾಣುವ ವಾಹನಗಳು ಸ್ಥಳದಲ್ಲಿ ಇದ್ದವು ಎಂದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**ಪಾಟೀ ಸವಾಲು :– ಮಾನ್ಯ ಎಪಿಪಿಯವರಿಂದ :–**

ದಿಃ 28.06.2019 ರಂದು ನಿಪಿ 5 ಪಂಚನಾಮೆ ಜರಗಿಸಲಾಗಿರುತ್ತದೆ ಎಂದರೆ ಸರಿ. ಅಪಘಾತಕ್ಕಿಡಾಗಿದ್ದ ವಾಹನಗಳ ಸಂಖ್ಯೆ ಕೆಎ–10–ಎ–3419 ಟಾಟಾ ಎಸ್ ಗೂಡ್ಸ್ ವಾಹನ ಮತ್ತು ಕೆಎ–02–ಎಜಿ–5823 ಇಚರ್ ಗೂಡ್ಸ್ ವಾಹನ ಆಗಿದ್ದು ಅವುಗಳನ್ನು ನಮ್ಮ ಸಮಕ್ಷಮ ಮುಂದಿನ ಕ್ರಮಕ್ಕಾಗಿ ಅಮಾನತ್ತುಪಡಿಸಿಕೊಂಡಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರರಿಂದ**

ನಾನು ಸುರಭಿ ಹೋಟೆಲ್ ನ ಬಳಿ ಸಹಿ ಮಾಡಿರುತ್ತೇನೆ. ನಾನು ಸ್ಥಳದಲ್ಲಿ ಸಹಿ ಮಾಡದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುರಭಿ ಹೋಟೆಲ್ ನ ಸಮೀಪ ಜನ ಸಂದಣಿ ಇರುತ್ತದೆ ಎಂದರೆ ಸರಿ. ನನ್ನ ಮುಂದೆ ಯಾವುದೇ ಪಂಚನಾಮೆ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಪೊಲೀಸರು ಬರೆದಿದ್ದಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಪೊಲೀಸರು ಒಬ್ಬರು ಇದ್ದರು. ವಶಪಡಿಸಿಕೊಂಡ ವಾಹನಗಳ ಸಂಖ್ಯೆಗಳು ನನಗೆ ನೆನಪಿಲ್ಲ. ಪಂಚನಾಮೆಗೆ ನನ್ನೊಂದಿಗೆ ಚಾಸಾ 9 ರವರು ಸಹಿ ಮಾಡಿರುತ್ತಾರೆ. ಪಂಚನಾಮೆಗೆ ನಿವಿಬ್ಬರೆ ಸಹಿ ಮಾಡಿದ್ದು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಚಾಸಾ 9 ರವರು ನನ್ನ ಸಂಬಂಧಿ ಅಲ್ಲ ನನ್ನ ಪಕ್ಕದ ಮನೆಯವರು. ವಶಪಡಿಸಿಕೊಂಡಿದ್ದಾರೆ ಎನ್ನಲಾದ ವಾಹನಗಳ ಬಣ್ಣಗಳು ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ವಾಹನಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ವಶಪಡಿಸಿಕೊಂಡಿದ್ದೆಯಾದರೆ ಆ ವಾಹನಗಳ ಬಣ್ಣಗಳು ತಿಳಿಯುತ್ತಿತ್ತು ಎಂದರೆ ಸರಿಯಲ್ಲ. ಚಾಸಾ 9 ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ಮತ್ತು ಚಾಸಾ 9 ರವರು ಒಂದೇ ಊರಿನವರು ಮತ್ತು ಒಂದೇ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ನಾನು ಆ ದಿನ ಸ್ಥಳಕ್ಕೆ ಹೋಗಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ ಹಾಗೂ ನಾನು ಸ್ಥಳದಲ್ಲಿ ಸಹಿ ಮಾಡಿಲ್ಲ, ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ